ವಾದುದು. ಇವತ್ತು ರೈತರ ಐ.ಪಿ. ಸೆಟ್ಟುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಾ ಇದ್ದಾರೆ. ವಿಜಿಲೆನ್ಸ್ ನವರು ಅವರ ಮೇಲೆ ಕೇಸ್ ಹಾಕುತ್ತಾ ಇದ್ದಾರೆ. ಕ್ರಿಮಿನಲ್ ಕೇಸ್ ಹಾಕಿದ್ದಾರೆ. ಈ ರೀತಿ ಐ. ಪಿ. ಸೆಟ್ಟುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ರೈತರಿಗೆ ಬಹಳ ತೊಂದರೆಯಾಗಿದೆ, ನಮ್ಮ ಕಡೆ ಟೂರ್ ಮಾಡಿ ಬಂದು ನೋಡಿ ಎಂದು ಸಚಿವರನ್ನು ಕೇಳಿಕೊಂಡಾಗ ಅವರು ಸಮ್ಮರ್ ಆದ ನಂತರ ನಿಮ್ಮ ಕಡೆ ಬರುತ್ತೇನೆ ಎಂದು ಹೇಳಿದರು. ರಾಷ್ಟ್ರಕ್ಕೆ ಆಹಾರ ಧಾನ್ಯಗಳನ್ನು ಉತ್ಪತ್ತಿಮಾಡಿ ಕೊಡುವಂಥ ರೈತರ ಐ. ಪಿ ಸೆಟ್ಟುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ವಿಜಿಲೆನ್ಸ್‌ನವರು ಕೇಸ್ ಹಾಕಿದ್ದಾರೆ. ರೈತರ ಮೇಲೆ ಹತ್ತಾರು ಸಾವಿರ ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ದಂಡ ಕೊಡದೇ ಹೋದರೆ ಜೈಲಿಗೆ ಹೋಗಬೇಕು. ಜೈಲಿನಿಂದ ಕೋರ್ಟಿಗೆ ಹೋಗುತ್ತಾ ಇರಬೇಕು. ಇದೇ ಏನು ಗರೀಬರ ಸರ್ಕಾರ ಎಂದು ನಾನು ಸ್ಪಷ್ಟವಾಗಿ ಕೇಳುತ್ತಾ ಇದ್ದೇನೆ. ಮಾನ್ಯ ಕೆ.ಇ.ಬಿ, ಸಚಿವರು ಕೂತು ಕೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ, ದುರ್ದೈವದಿಂದ ಅವರು ಎದ್ದು ಹೋಗಿದ್ದಾರೆ. ರೈತರಿಗೆ ಇಷ್ಟೆಲ್ಲಾ ಕಷ್ಟದ ಜೊತೆಗೆ ಕೆ.ಇ.ಬಿ. ಯವರ ಗಲಾಟೆ ಬೇರೆ ಇದೆ. ಕೆ.ಇ.ಬಿ. ಯವರು ಇವರ ಜೊತೆಗೆ ಸಹಕರಿಸುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಕ್ರಾಂತಿಯಾಗಬಹುದು ಎಂದು ಕಾಣುತ್ತದೆ ಎಂದು ಹೇಳಿ ಮಾನ್ಯ ಅರ್ಥ ಸಚಿವರಾದ ಯಾಹ್ಯಾರವರು ಮಂಡಿಸಿದ ಬಡ್ಜೆಟ್ ಏನಿದೆ ಇದು ತೃಪ್ತಿಕರವಾಗಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತಾ, ನನಗೆ ಇಷ್ಟು ಟೈಂ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

(ಹಲವಾರು ಸದಸ್ಯರುಗಳು ಎದ್ದು ನಿಂತುಕೊಂಡು ತಮಗೂ ಬಡ್ಜೆಟ್ ಮೇಲೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಲು ಶುರು ಮಾಡಿದರು..... ಆಗ .....)

ಚೇರ್ಮನ್‌ರವರು.—ಸಭಾಧ್ಯಕ್ಷರು ಎದ್ದು ನಿಂತುಕೊಂಡಾಗ ತಾವು ಯಾರೂ ಈ ರೀತಿಯಾಗಿ ಎದ್ದು ನಿಂತುಕೊಳ್ಳಬಾರದು ದಯವಿಟ್ಟು, ಕುಳಿತುಕೊಳ್ಳಿ. ಮೊದಲು ಕಾನೂನನ್ನು ಪರಿಪಾಲನೆ ಮಾಡಿ. ಈಗ ಮಾನ್ಯ ಮಂತ್ರಿಗಳವರು ಚರ್ಚೆಗೆ ಉತ್ತರ ಕೊಡಬೇಕಾಗಿದೆ. ಅವರಿಗೆ ಕಡಿಮೆ ಎಂದರೂ ೧–೨ ಗಂಟೆಗಳ ಕಾಲ ಬೇಕಾಗಬಹುದು, ಇನ್ನು ನೀವು ಎಲ್ಲರೂ ಮಾತನಾಡಲು ಶುರು ಮಾಡಿದರೆ ತುಂಬಾ ಹೊತ್ತಾಗುತ್ತದೆ. ತಾವು ಭಾಷಣ ಮಾಡಲು ಹಿಂದಿನ ದಿನಗಳಲ್ಲಿ ಸಾಕಷ್ಟು ಅವಕಾಶವಿತ್ತು ಅದನ್ನು ನೀವು ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲವೆಂದು ವಿಶಾದದಿಂದ ಹೇಳಬೇಕಾಗುತ್ತದೆ. ಆದುದರಿಂದ ಮುಂದೆ ಇನ್ನು ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆ ಬಂದಾಗ ಯಾವುದಾದರೂ ವಿಷಯದ ಬಗ್ಗೆ ಮಾತನಾಡಬಹುದು ಆದುದರಿಂದ ಈಗ ಮಾನ್ಯ ಸದಸ್ಯರುಗಳು ದಯವಿಟ್ಟು ಮಾನ್ಯ ಮಂತ್ರಿಗಳವರಿಗೆ ಉತ್ತರ ಕೊಡಲು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್.—ನನಗೆ ಬಡ್ಜೆಟ್‌ನ ಮೇಲೆ ಮಾತನಾಡಲು ಅವಕಾಶ ಕೊಡುವುದಿಲ್ಲವೆನ್ನುವುದಾದರೆ ನಾನು ವಾಕ್‌ಔಟ್ ಮಾಡುತ್ತೇನೆ.

(ಆನಂತರ ಮಾನ್ಯ ಸದಸ್ಯರು ವಾಕ್‌ಔಟ್ ಮಾಡಿದರು)

† ಶ್ರೀ ಎಸ್. ಎಂ. ಯಾಹ್ಯಾ (ಅರ್ಥ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಕಳೆದ ೫–೬ ದಿವಸಗಳಿಂದ ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆಯ ಮೇಲೆ ಮಾನ್ಯ ಸದಸ್ಯರುಗಳು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಲ್ಲಿ ೨೮–೨೯ ಜನ ಮಾನ್ಯ ಸದಸ್ಯರುಗಳು ಭಾಗವಹಿಸಿದ್ದರು. ಸರ್ಕಾರದ ನೀತಿ ಬಗ್ಗೆ, ಸರ್ಕಾರದ ಧೋರಣೆ ಬಗ್ಗೆ ವಿಚಾರ ಸಹ ಹೇಳಿದ್ದಾರೆ. ಅದೇ ರೀತಿಯಲ್ಲಿ ನೀತಿ ಧೋರಣೆಗಳನ್ನು ಯಾವರೀತಿಯಲ್ಲಿ ಜಾರಿಗೆ ತರಬೇಕು ಮತ್ತು ತರುತ್ತಿದ್ದೇವೆಂದೂ ಕೂಡ ಹೇಳಿದ್ದಾರೆ. ಕೆಲವರಿಗೆ ನಮ್ಮ ನೀತಿಯ ಬಗ್ಗೆ ಎಲ್ಲೂ ತಪ್ಪು ಕಂಡು ಹಿಡಿಯಲಿಕ್ಕೆ ಆಗದಿದ್ದರೂ ಇಂಪ್ಲಿಮೆಂಟೇಷನ್ ಮಾಡುವುದರಲ್ಲಿ ನಿಧಾನವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ಸಹ ಕೊಟ್ಟಿದ್ದಾರೆ. ಅವರೆಲ್ಲರನ್ನೂ ನಾನು ಅಭಿನಂದಿಸಲಿಚ್ಛಿಸುತ್ತೇನೆ. ಈ ವರ್ಷದ ಚರ್ಚೆಯಲ್ಲಿ ಬಹಳಷ್ಟು ತೀರ್ವವಾದ ಟೀಕೆಗಳು ಬರಲಿಲ್ಲ ಮಾನ್ಯ ವಿರೋಧ ಪಕ್ಷದವರಲ್ಲಿ ಕೆಲವು ಸದಸ್ಯರುಗಳು ಸಹ ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ಸರ್ಕಾರ ಮಾಡುತ್ತಿರುವಂಥ ಕಾರ್ಯಗಳನ್ನು ಸಹ ಮೆಚ್ಚಿದ್ದಾರೆ. ಈ ಸಭೆಯಲ್ಲಿ ನಮ್ಮ ಬಡ್ಜೆಟ್‌ನ ವಿಚಾರದಲ್ಲಿ ಬಹಳ ಮಟ್ಟಿಗೆ ಒಳ್ಳೆಯ ಅಭಿಪ್ರಾಯವನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಇನ್ನು ಕೆಲವರು ಇನ್ನು ಉತ್ತಮ ರೀತಿಯಲ್ಲಿ ಕೆಲಸ ಮಾಡಬಹುದಾಗಿತ್ತು ಎನ್ನುವ ಭಾವನೆಯನ್ನು ಸಹ ಕೆಲವರು ವ್ಯಕ್ತಪಡಿಸಿದ್ದಾರೆ. ಇವತ್ತು ನಮ್ಮ ಸರ್ಕಾರ ಕೆಲವೇ ವರ್ಷಗಳಲ್ಲಿ ಒಳ್ಳೆಯ